ಪಿ.ಎನ್.ಶ್ರೀವತ್ಸ, ಬೆಂಗಳೂರು

*ದೇವರ ಮುಂದೆ ಹಚ್ಚಿಡುವ ದೀಪಕ್ಕೂ, ಸತ್ತಾಗ 13 ದಿವಸ ಹಚ್ಚಿಡುವ ದೀಪಕ್ಕೂ ಏನಾದರೂ ವ್ಯತ್ಯಾಸವಿದೆಯೆ?*



ದೀಪ ಅದೇ, ಬೆಳಕೂ ಅದೇ. ಒಂದು ಮನಕ್ಕೆ ಶಾಂತಿ ನೀಡುತ್ತದೆ, ಒಂದು ಆತ್ಮಕ್ಕೆ ಶಾಂತಿ ಬೇಡುತ್ತದೆ!

ಪಿ.ಜಿ. ರಾಘವೇಂದ್ರ, ಮೈಸೂರು

*ನೀನು ಕೋದಂಡರಾಮನೋ... ಪರಶುರಾಮನೋ?*

ಉತ್ತರಗಳನ್ನು ನೋಡಿಯೇ ತಿಳಿಯಲಿಲ್ಲವೇ? ಪರಚುರಾಮ!

ಸರಸ್ವತಿ ಮೂರ್ತಿ, ಬೆಂಗಳೂರು

*ಯಮಧರ್ಮನು ಅಪಾಯಿಂಟ್‌ಮೆಂಟ್ ಕೊಟ್ಟು ಬರುವಂತಿದ್ದರೆ, ಅರ್ಧ ಜನ ಭಯದಿಂದಲೇ ಪ್ರಾಣ ಬಿಟ್ಟು, ಯಮನಿಗೆ ಪಾಶ ಹಾಕುವ ಕೆಲಸವೇ ಇರುತ್ತಿರಲಿಲ್ಲ ಅಲ್ಲವೇ?*

ಈಗಲೂ ಆ ಕೆಲಸವಿಲ್ಲ; ನರ್ಸಿಂಗ್ ಹೋಂನಲ್ಲಿ ನಿಮ್ಮ ಹಣ ಮುಗಿದ ತಕ್ಷಣ ತೆಗೆಯುವ ಟ್ಯೂಬ್‌ಗಳೇ ಯಮನ ಪಾಶ!

ಎಂ.ಎನ್. ಸೋಮಶೇಖರ್, ಮೈಸೂರು

*ಶ್ರೀಕೃಷ್ಣನ ಕೊಳಲಿನ ಆಕರ್ಷಕ ನಾದಕ್ಕೂ, ಶ್ರೀಶಾರದಾದೇವಿಯ ಮನಮೋಹಕ ವೀಣಾನಾದಕ್ಕೂ ಇರುವ ವ್ಯತ್ಯಾಸವೇನು?*



ಒಂದು ಇನಿಯನ ದನಿ, ಇನ್ನೊಂದು ಇನಿದನಿ!

ಕಾಳೀಹುಂಡಿ ಶಿವಕುಮಾರ್, ಮೈಸೂರು

*ಇಲ್ಲೊಬ್ಬ ಉಪ್ಪು ತಿಂದರೂ ಸಹ ನೀರು ಕುಡಿಯಲೇ ಇಲ್ಲವಲ್ಲಾ...?*

ಹುಷಾರ್.. ಅನ್ನಿ! ತಡವಾದರೆ ಹೆಚ್ಚು ನೀರು ಕುಡೀಬೇಕಾಗುತ್ತೆ!

ಎಸ್. ಭಗವತಿ, ಗೊರೂರು

*ಅನಾಚಾರಿಗಳ ಮನೆಯ ಮುಂದೆಯೂ ಬೃಂದಾವನ ಇರುತ್ತಾ?*

ಅಲ್ಲೇ ಅದು ಇರಬೇಕಾದ್ದು. ಆಚಾರ ಇರುವವನಿಗೆ ಮನದಲ್ಲೇ ಬೃಂದಾವನವಿರುತ್ತದೆ!

ಎಚ್.ಆನಂದ್ ಕುಮಾರ್, ಚಿತ್ರದುರ್ಗ

*ಮತವನ್ನು ಭಿಕ್ಷೆ ಎನ್ನಲೋ, ಹಕ್ಕು ಎನ್ನಲೋ ತಿಳಿಸಿ ಪ್ಲೀಸ್...?*

ಎರಡೂ ಅಲ್ಲ, ದಾನವರಿಗೆ ನೀಡದೆ, ಮಾನವರಿಗೆ ನೀಡಬೇಕಾದ ದಾನ!

ಎಂ.ಬಿ. ಪ್ರೀತಿ ಪ್ರಜ್ವಲ್, ಬಳ್ಳಾರಿ

*ಬಹುಮಾನಿತ ಪ್ರಶ್ನೆಗೆ ನೀವು ಕೊಡುವ ಬಡಾ ಬಹುಮಾನ ಎಷ್ಟು ರಾಮ್?*

ಮೊದಲು ಅಂತಹ ಪ್ರಶ್ನೆ ಕೇಳಿ; ಉತ್ತರ ಚೆಕ್ ಮೂಲಕ ಪೋಸ್ಟ್‌ನಲ್ಲಿ ಬರುತ್ತದೆ.

ಪೇಂಟರ್ ಪಾಪು, ಸಂತೇಮರಹಳ್ಳಿ

*ಪ್ರತಿಯೊಬ್ಬ ಯಶಸ್ವಿ ಪುರುಷನ ಹಿಂದೆ ಒಬ್ಬ ಮಹಿಳೆ ಇರುತ್ತಾಳಂತೆ. ಯಾಕೆ?*

ಮುಂದೆ ಬಂದರೆ ಅವಳನ್ನೇ ನೋಡುತ್ತಾ ಕುಳಿತು ಇವನು ಸಾಧನೆಯನ್ನೇ ಮರೆತುಬಿಡುತ್ತಾನಲ್ಲಾ!

ಮಹಾವೀರ ಕಾಸರ, ಚನ್ನಗಿರಿ

*ಪ್ರೇಮದ ಆಳ ಅಳೆಯುವುದು ಹೇಗೆ?*

ಆ ಪ್ರಪಾತದಲ್ಲಿ ಬಿದ್ದ ಯಾವುದೇ ಪ್ರೇಮಿಯನ್ನು ಕೇಳಿದರಾಯ್ತು!

ಎಂ.ಬಿ.ಕೃಷ್ಣಮೂರ್ತಿ, ಚಾಮರಾಜನಗರ

*ಆಸೆಗೂ, ಚಪಲಕ್ಕೂ ವ್ಯತ್ಯಾಸ?*

ಆಸೆ ಡಿಡಿಟಿ, ಚಪಲ ಸಯನೈಡ್!

ಓಂ ಚನ್ನೇಶ್, ಅರಬಿಳಚಿ ಕ್ಯಾಂಪ್

*ಮದುವೆಯಾಗಲು ಜಾತಿ- ಜಾತಕವನ್ನೆಲ್ಲಾ ನೋಡುವ ಜನ ಲವ್ ಮಾಡೋವಾಗ ಏಕೆ ನೋಡುವುದಿಲ್ಲ?*

ಜಾತಿ ತೋರಿಸಿದರೆ ರೀತಿ, ಜಾತಕ ತೋರಿಸಿದರೆ ಪಾತಕ ಗೊತ್ತಾಗಿ ಲವ್ ಅನ್ನೋವ್ರು ಬೌವ್ ಅಂತಾರಂತೆ!

ವಿ.ಎಸ್. ಹಿಂದೂಪುರ, ಬಳ್ಳಾರಿ

*ಹುಟ್ಟಿದಾಗ ಉಸಿರು ಇರುತ್ತದೆ, ಹೆಸರು ಇರುವುದಿಲ್ಲ; ಸತ್ತಾಗ ಹೆಸರು ಇರುತ್ತದೆ, ಉಸಿರು ಇರುವುದಿಲ್ಲ. ಇವೆರಡರ ಮಧ್ಯೆ...?*

ಹೆಸರು, ಉಸಿರು ಉಳಿಸಿಕೊಳ್ಳಕ್ಕೆ ಏದುಸಿರು, ಉಬ್ಬಸ, ನಿಟ್ಟುಸಿರು!

## ಬಹುಮಾನಿತ ಪ್ರಶ್ನೆ

ಎನ್. ಶಿವಕುಮಾರ್, ನೇರಲಗುಡ್ಡ

*ಗಂಡನನ್ನು ಬೆದರಿಸುವ ಹೆಂಡತಿ ಜಿರಳೆಗೆ ಅಂಜುವವಳೇಕೆ ಗುರು?*

ಜಿರಳೆ ಇವಳ ಕೆಂಗಣ್ಣ ನೋಟಕ್ಕೂ ಬೆದರದೆ ಮೀಸೆ ಆಡಿಸುತ್ತದಲ್ಲ!

ಎನ್.ವಿ.ಶ್ರೀನಿವಾಸ್, ಮೈಸೂರು

*ನಗುವ ಹೆಣ್ಣನ್ನು, ಅಳುವ ಗಂಡನ್ನು ನಂಬಿದರೆ ಏನಾಗುತ್ತದೆ?*

ಕೆಜೆಪಿಯಂತೆ ತಾನೂ ಹಾಳಾಗಿ, ತನ್ನ ತವರೂ ಹಾಳಾಗುತ್ತದೆ.

ಆರ್. ನಾಗರಾಜ್, ಗೊರೂರು

*ಶಿಲಾಬಾಲಿಕೆಯರು ಜೀವ ತಳೆದು ಕುಣಿಯುವಂತಿದ್ದರೆ?*

ಏನೇನೂ ಪ್ರಯೋಜನವಿಲ್ಲ; ಮೌಸ್ ಕ್ಲಿಕ್ ಮಾಡಿದರೆ ನೆಟ್‌ನಲ್ಲಿ ಅವರು ಊಹಿಸಲೂ ನಾಚುವಂತಹ ನೃತ್ಯಗಳು ಲಭ್ಯ!

ಜೆ.ಸಿ.ರವಿಕುಮಾರ್, ಜಯಸುವರ್ಣಪುರ

*ನಮ್ಮ ದೇಶದಲ್ಲಿ ಧರ್ಮ ಮತ್ತು ರಾಜಕಾರಣಗಳು ಡೈವೋರ್ಸ್ ಪಡೆಯುವುದು ಯಾವಾಗ?*




ಮಂತ್ರಕ್ಕೆ ಮತದಾರರು ಉದುರುವುದು ನಿಂತಾಗ!

ಶಿವರಾಜ್ ಕೆ. ವಿಭೂತಿ, ಹರಿಹರ

*ಇಲ್ಲೊಬ್ಬ ಸ್ವಾಮಿಯಾಗೋ ಅಂದರೆ ಒಲ್ಲೆ, ಶಿಷ್ಯ ಆಗ್ತೀನಿ ಅಂತಾನಲ್ಲಾ, ಏಕೆ?*

ಬುದ್ಧಿವಂತ; ಅನಿಷ್ಟಕ್ಕೆ ಮಠಾಧೀಶನನ್ನ ಗುರಿ ಮಾಡಿ ತಾನು ಝುಂ ಎಂದಿರಬಹುದೆಂದು ತಿಳಿದಿದ್ದಾನೆ!

ಬಿ. ಸುಮಲತಾ ರಾಘವೇಂದ್ರ, ಉಜಿರೆ

*ರಾಮ್‌ಜಿ, ಎಲ್ಲರ ಪ್ರಶ್ನೆಗಳಿಗೂ ಚುಟುಕಾಗಿ ಉತ್ತರಿಸುವಿರಲ್ಲ, ಇದರ ಗುಟ್ಟೇನು?*

ಕುಟುಕು, ಗುಟುಕು ಇರಲು ಚುಟುಕೇ ಸೂಕ್ತ!

ಎಚ್. ಸಿದ್ಧಾರ್ಥ ಹೆಬ್ಬಾರ್, ಈದು

*ಈ ಜಗತ್ತಿನಲ್ಲಿ ಇಲ್ಲದಿರುವುದು ಏನು?*

ಇನ್ನೊಂದು ಜಗತ್ತು.

■ ರಾಮ್